ರೇಷ್ಮೆ ಕಾನೂನು ಜಾರಿ ದಳ ಕಾರ್ಯನಿರ್ವಹಿಸುತ್ತಿರುವ ಬಗ್ಗೆ

578(1077) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಉದ್ಯಮಕ್ಕೆ ಪೂರಕವಾಗಿದ್ದ ರೇಷ್ಮೆ ಇಲಾಖೆಯಲ್ಲಿನ ಜಾರಿ ದಳ, ಇದರ ಕಾರ್ಯವ್ಯಾಪ್ತಿ ಏನು;

ಆ) ಈ ಜಾರಿದಳ ಪ್ರಸ್ತುತ ಕಾರ್ಯನಿರ್ವಹಿಸುತ್ತಿದೆಯೇ;

ಇ) ಕಾರ್ಯ ನಿರ್ವಹಿಸದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ರೇಷ್ಮೆ ಮೊಟ್ಟೆ, ಗೂಡು ಮತ್ತು ಕಚ್ಚಾ ರೇಷ್ಮೆಯ ಅನಧಿಕೃತ ಉತ್ಪಾದನೆ ಮತ್ತು ವಹಿವಾಟನ್ನು ರಾಜ್ಯದಾದ್ಯಂತ ನಿಯಂತ್ರಿಸಲು ಕಾಯಿದೆ ಜಾರಿ ವಿಭಾಗ ಸ್ಥಾಪಿಸಲಾಗಿದೆ.

ಆ) ಹೌದು.

ಇ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಒಳನಾಡ ಮೀನುಗಾರಿಕೆ

579(1079) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಮೀನುಗಾರಿಕೆ ಹಾಗೂ ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಳನಾಡಿನ ಮೀನುಗಾರಿಕೆಯ ಚಟುವಟಿಕೆಗಳಿಗೆ ಸರ್ಕಾರವು ಸೌಲಭ್ಯಗಳನ್ನು ಒದಗಿಸುತ್ತಿದೆಯೇ;

ಆ) ಹಾಗಿದ್ದಲ್ಲಿ, ಅದರ ವಿವರಗಳನ್ನು ನೀಡುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರುಗಳ ರಾಜ್ಯ ಸಚಿವರು)

ಅ) - ಹೌದು -

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1079ಕ್ಕೆ ಅನುಬಂಧ

1) ಒಳನಾಡು ಪ್ರದೇಶಗಳಲ್ಲಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ, ಸಲಕರಣೆಗಳನ್ನು ಕೊಳ್ಳಲು ಸಹಾಯಧನ, ಕೆರೆ, ಕೊಳಗಳಲ್ಲಿ, ಸಿಹಿ ನೀರು ಮೀನು ಮತ್ತು ಸೀಗಡಿ ವ್ಯವಸಾಯಕ್ಕೆ ಪ್ರೋತ್ಸಾಹ, ಬಾವಿ, ಹೊಂಡಗಳಲ್ಲಿ ಮೀನು ಕೃಷಿಗೆ ಸಹಾಯಧನವನ್ನು ನೀಡಲಾಗುತ್ತಿದೆ.

2) ಜೌಗು ಮತ್ತು ಚೌಳು ಪ್ರದೇಶಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಕೊಳ ನಿರ್ಮಾಣಕ್ಕೆ ಪ್ರತಿ ಎಕರೆಗೆ ರೂ. 30,000-00 ಸಹಾಯಧನ ನೀಡಲಾಗುತ್ತಿದೆ.